ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ

Spl. NDPS 8/2020

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ಕೊಟ್ರೇಶ್ | ಪಿ.ಡಬ್ಲ್ಯೂ. | 8 |
| ತಂದೆಯ ಹೆಸರು | : | ಸಿದ್ದಪ್ಪ | ಸಿ.ಡಬ್ಲ್ಯೂ. | 13 |
| ವಯಸ್ಸು | : | 29 ವರ್ಷ | | |
| ಉದ್ಯೋಗ | : | ಸಿಪಿಸಿ- 447, ವಿದ್ಯಾನಗರ ಪೋಲೀಸ್ ಠಾಣೆ, | | |
| ವಾಸ ಸ್ಥಳ | : | ದಾವಣಗೆರೆ. | | |

ದಿ.20.08.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)** ಃ

1. 2017 ರಿಂದ 2024 ರ ವರೆಗೆ ಸಿ.ಇ.ಎನ್. ಪೋಲೀಸ್ ಠಾಣೆಯಲ್ಲಿ ಪೋಲೀಸ್ ಪೇದೆಯಾಗಿ ಕೆಲಸ ಮಾಡಿರುತ್ತೇನೆ.

2. ದಿ.26.12.2019 ರಂದು ನಾನು ಸಿ.ಇ.ಎನ್. ಪೋಲೀಸ್ ಠಾಣೆಯಲ್ಲಿ ಇದ್ದಾಗ ಮಧ್ಯಾಹ್ನ 12.00 ಗಂಟೆಯ ಸಮಯದಲ್ಲಿ ನಮ್ಮ ಪೋಲೀಸ್ ಇನ್ ಸ್ಪೆಕ್ಟರ್ ರವರು ನನಗೆ ಮತ್ತು ಚಾಸಾ-9 ರಿಂದ 16 ರವರಿಗೆ ಚಾಸಾ-1 ರವರ ಕಛೇರಿಗೆ ಬರಲು ಹೇಳಿದರು. ಅದರಂತೆ ನಾವು ಚಾಸಾ-1 ರವರ ಕಛೇರಿಗೆ ಹೋಗಿದ್ದು, ಚಾಸಾ-1 ರವರು ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಹಿಂಭಾಗ, ಗಣೇಶ ಲೇಔಟ್, 2 ನೇ ಕ್ರಾಸ್ ನಲ್ಲಿ ಯಾರೋ 3 ಜನ ವ್ಯಕ್ತಿಗಳು ಗಾಂಜಾ ಮಾರಾಟ ಮಾಡಲು ಬಂದಿದ್ದಾರೆ ಎಂದು ಮಾಹಿತಿ ಬಂದಿದ್ದು, ನಾವುಗಳೆಲ್ಲರೂ ದಾಳಿಗೆ ಹೋಗೋಣ ಎಂದು ತಿಳಿಸಿದರು.

3. ಇದೇ ಸಂದರ್ಭದಲ್ಲಿ ಚಾಸಾ-1 ರವರು ಹೆಚ್.ಸಿ. 106 ಇವರಿಗೆ ಪಂಚರನ್ನು ಮತ್ತು ಪತ್ರಾಂಕಿತ ಅಧಿಕಾರಿಯನ್ನು ಕರೆದುಕೊಂಡು ಬರುವಂತೆ ತಿಳಿಸಿದ್ದರು. ಅದರಂತೆ ಪಂಚರಾಗಿ ಚಾಸಾ-2 ಮತ್ತು 3 ಮತ್ತು ಪತ್ರಾಂಕಿತ ಅಧಿಕಾರಿಯಾಗಿ ಚಾಸಾ-4 ಇವರನ್ನು ಕರೆದುಕೊಂಡು ಬಂದರು, ಚಾಸಾ-1 ರವರು ಇವರಿಗೂ ಗಾಂಜಾ ಮಾರಾಟದ ಮಾಹಿತಿ ತಿಳಿಸಿದರು.

4. ನಂತರ ನಾವೆಲ್ಲರೂ ಸರಕಾರಿ ವಾಹನಗಳಲ್ಲಿ ಮತ್ತು ಬೈಕುಗಳಲ್ಲಿ ಮಧ್ಯಾಹ್ನ 12.15 ಗಂಟೆಗೆ ಠಾಣೆಯಿಂದ ಹೊರಟು 12.30 ಗಂಟೆಗೆ ಗಣೇಶ ಲೇಔಟಿನ ಇಂದಿರಾ ಕ್ಯಾಂಟಿನ ಹತ್ತಿರ ಇರುವ ಜಾಲಿ ಗಿಡಗಳ ಪಕ್ಕದಲ್ಲಿ ನಿಂತುಕೊಂಡು, ಗಾಂಜಾ ಮಾರಾಟ ಮಾಡಲು ಬಂದ ವ್ಯಕ್ತಿಗಳ ಚಲನವಲನಗಳನ್ನು ಗಮನಿಸಿದೆವು. ಸದರಿ ಸ್ಥಳದಲ್ಲಿ 3 ಜನ ಆರೋಪಿತರು ಇದ್ದರು. ಅವರಲ್ಲಿ ಒಬ್ಬ ಕೆಂಪು ಮತ್ತು ಹಳದಿ ಬಣ್ಣದ ಕವರ್ ಹಿಡಿದುಕೊಂಡಿದ್ದು, ಇನ್ನೊಬ್ಬ ಕೆಂಪು ಬಣ್ಣದ ಕವರನ್ನು ಹಿಡಿದುಕೊಂಡಿದ್ದ.

5. ಈ ಸಂದರ್ಭದಲ್ಲಿ ಚಾಸಾ-1 ರವರು 100 ರೂ ಮುಖಬೆಲೆಯ ಐದು ನೋಟುಗಳನ್ನು ನನಗೆ ನೀಡಿ, ಗಾಂಜಾ ಮಾರಾಟ ಮಾಡಲು ನಿಂತಿದ್ದ ವ್ಯಕ್ತಿಗಳ ಬಳಿ ಹೋಗಿ ಗಾಂಜಾವನ್ನು ಖರೀದಿಸಿ ತರಲು ತಿಳಿಸಿದರು. ಅದರಂತೆ ನಾನು ಸದರಿ 3 ಜನರ ಪೈಕಿ ಕೆಂಪು ಮತ್ತು ಹಳದಿ ಬಣ್ಣದ ಕವರನುನ ಹಿಡಿದುಕೊಂಡಿದ್ದ ವ್ಯಕ್ತಿಯ ಬಳಿ ಹೋಗಿ 200 ರೂಪಾಯಿಗೆ ಒಂದು ಪ್ಯಾಕೆಟ್ ನಂತೆ ಎರಡು ಪ್ಯಾಕೇಟಗಳನ್ನು ಖರೀದಿಸಿ, ಚಾಸಾ-1 ರವರಿಗೆ ಕೊಟ್ಟು, ಉಳಿದ 100 ರೂಪಾಯಿಯನ್ನು ಸಹ ಕೊಟ್ಟೆನು.

6. ಸದರಿ ಎರಡು ಪ್ಯಾಕೆಟ್ ಗಳನ್ನು ಚಾಸಾ-1 ರವರು ತೆರೆದು ನೋಡಿದಾಗ ಗಾಂಜಾದ ಘಾಟು ವಾಸನೆ ಬಂದಿದ್ದು, ಸದರಿ ಗಾಂಜಾ ಹೂವು, ಮೊಗ್ಗು ಮತ್ತು ಬೀಜಗಳಿಂದ ಕೂಡಿತ್ತು. ಇದು ಗಾಂಜಾ ಎಂದು ಖಚಿತಪಡಿಸಿಕೊಂಡ ಮೇಲೆ ನಾವು ದಾಳಿ ಮಾಡಲು ಸದರಿ ವ್ಯಕ್ತಿಗಳ ಬಳಿ ಹೋದಾಗ ಅವರು ಓಡಿ ಹೋಗಲು ಪ್ರಯತ್ನಿಸಿದರು. ನಾವೆಲ್ಲರೂ ಸುತ್ತುವರಿದು, ಆ ಮೂವರನ್ನು ವಶಕ್ಕೆ ಪಡೆದವು.

7. ಚಾಸಾ-1 ರವರು ಚಾಸಾ-4 ರವರ ಸಮಕ್ಷಮ ಸದರಿ 3 ಜನರನ್ನು ವಿಚಾರಿಸಿದಾಗ ಅವರುಗಳು ತಮ್ಮ ಹೆಸರು ಮತ್ತು ವಿಳಾಸವನ್ನು ತಿಳಿಸಿದರು. ರೇವಣಸಿದ್ದಪ್ಪ, ಸತೀಶ್ ಬಾಬುರಾವ್ ಮತ್ತು ಲೋಕೇಶ ಎಂದು ಅವರುಗಳು ತಮ್ಮ ಹೆಸರುಗಳನ್ನು ತಿಳಿಸಿದರು. ಅವರುಗಳು ಈ ಪ್ರಕರಣದ ಆರೋಪಿ 1 ರಿಂದ 3 ಇರುತ್ತಾರೆ. ಸದರಿ ಮೂವರು ಆರೋಪಿತರ ಪೈಕಿ 1 ನೇ ಆರೋಪಿ ಬಳಿ ಕೆಂಪು ಮತ್ತು ಹಳದಿ ಬಣ್ಣದ ಮಾರುತಿ ಟೆಕ್ಸ ಟೈಲ್ಸ ಎಂದು ಹೆಸರಿರುವ ಕವರನ್ನು ವಶಕ್ಕೆ ಪಡೆದುಕೊಂಡರು. ಸದರಿ ಕವರಿನಲ್ಲಿ ಹೂ, ಮೊಗ್ಗು ಮತ್ತ ಬೀಜಗಳಿಂದ ಕೂಡಿದ ಗಾಂಜಾ ಇತ್ತು, ಅದನ್ನು ತೂಕ ಮಾಡಲಾಗಿ, 218 ಗ್ರಾಮ್ ಇತ್ತು.

2 ನೇ ಆರೋಪಿಯ ಬಳಿ ಕೆಂಪು ಬಣ್ಣದ ಕವರಿದ್ದು, ಅದನ್ನು ವಶಕ್ಕೆ ಪಡೆದು ನೋಡಿದಾಗ ಅದರಲ್ಲಿ ಹೂ, ಮೊಗ್ಗು ಮತ್ತು ಬೀಜ ಇರುವ ಗಾಂಜಾ ಇತ್ತು. ಅದನ್ನು ತೂಕ ಮಾಡಲಾಗಿ ಅದು ಒಟ್ಟು 780 ಗ್ರಾಂ ಇತ್ತು. 3 ನೇ ಆರೋಪಿಯ ಬಳಿ ಯಾವುದೇ ಗಾಂಜಾ ಇದ್ದಿಲ್ಲ. ನಾನು ಖರೀದಿಸಿ ತಂದ್ದಿ ಗಾಂಜಾವನ್ನು ತೂಕ ಮಾಡಲಾಗಿ ಎರಡು ಪ್ಯಾಕೇಟ್ ಸೇರಿ ಒಟ್ಟು 12 ಗ್ರಾಂ ಇತ್ತು.

8. ನಂತರ ಪತ್ರಾಂಕಿತ ಅಧಿಕಾರಿಗೆ ಆರೋಪಿತರ ಅಂಗಶೋಧನೆ ಮಾಡಲು ಆರೋಪಿತರನ್ನು ಕೇಳಲಾಗಿ, ಆರೋಪಿತರು ಅಂಗಶೋಧನೆ ಮಾಡಲು ಒಪ್ಪಿಗೆ ನೀಡಿರುತ್ತಾರೆ. ಅದರಂತೆ ಪತ್ರಾಂಕಿತ ಅಧಿಕಾರಿಗಳು 1 ನೇ ಆರೋಪಿಯ ಅಂಗಶೋಧನೆ ಮಾಡಿದಾಗ 100 ರೂ ಮುಖಬೆಲೆಯ 10 ನೋಟುಗಳು ದೊರೆತಿರುತ್ತವೆ. ಈ ಹಣದ ಬಗ್ಗೆ ವಿಚಾರಿಸಿದಾಗ ಸದರಿ ಹಣ ಗಾಂಜಾ ಮಾರಾಟದಿಂದ ಬಂದ ಹಣ ಎಂದು ತಿಳಿಸಿರುತ್ತಾರೆ. ಉಳಿದ ಇಬ್ಬರು ಆರೋಪಿತರ ಬಳಿ ಹಣ ದೊರೆತಿರುವುದಿಲ್ಲ. ಈ ಎಲ್ಲಾ ವಸ್ತುಗಳನ್ನು ತೆಗೆದುಕೊಂಡು ಸ್ಥಳದಲ್ಲಿ ಸೀಲ್ ಮಾಡಿದರು ಹಾಗೂ ನಿಪಿ-10 ರಂತೆ ಪಂಚನಾಮೆಯನ್ನು ಮಧ್ಯಾಹ್ನ 12.40 ರಿಂದ 2.30 ಗಂಟೆಯವರೆಗೆ ಮಾಡಿರುತ್ತೇವೆ. ನಿಪಿ-10 ರಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಆದ್ದರಿಂದ ಸಾಕ್ಷಿಯ ಸಹಿಯನ್ನು **ನಿಪಿ-10(ಹೆಚ್)** ಎಂದು ಗುರುತಿಸಲಾಯಿತು. ಪಂಚಾಮೆಯ ಸಮಯದಲ್ಲಿ ನಿಪಿ-11 ರಿಂದ ನಿಪಿ-21 ಎಂದು ಗುರುತಿಸಲಾದ ಫೋಟೋಗಳನ್ನು ತೆಗೆದಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

9. ಎಂ.ಓ.3 ಮತ್ತು ಎಂ.ಓ.4 ಎಂದು ಗುರುತಿಸಲಾದ ಕವರುಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಎಂ.ಓ.1 ನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ನಂತರ ಸದರಿ ಮಾಲುಗಳೊಂದಿಗೆ ಆರೋಪಿತರನ್ನು ಪೋಲೀಸ್ ಠಾಣೆಗೆ ಕರೆದುಕೊಂಡು ಬಂದಿರುತ್ತೇವೆ. ಈ ಪ್ರಕರಣದಲ್ಲಿ ವಶಪಡಿಸಿಕೊಂಡ ಹಣವನ್ನು ಈಗಾಗಲೇ ಎಂ.ಓ.2 ಎಂದು ಗುರುತಿಸಲಾಗಿದೆ.

<u>ಪಾಟೀ ಸವಾಲು : ಶ್ರೀ ಕೆ.ಎಚ್.ವಿ, ವಕೀಲರಿಂದ ಆರೋಪಿತರ ಪರವಾಗಿ</u> :

10. ಪಂಚನಾಮೆಯ ಪ್ರಕ್ರಿಯೆಗಳ ಪೋಟೋಗಳನ್ನು ಚಾಸಾ-16 ರವರು ತೆಗೆದಿರುತ್ತಾರೆ. ನಾನು ಆರೋಪಿತರ ಬಳಿ ಹೋಗಿ ಗಾಂಜಾ ಖರೀದಿ ಮಾಡಿದ ಪೋಟೋವನ್ನು ತೆಗೆದಿಲ್ಲ. ಆರೋಪಿತರು ಸ್ಥಳದಲ್ಲಿ ನಿಂತಿತರುವ ಮತ್ತು ಕೈಗಳಲ್ಲಿ ಕವರುಗಳನ್ನು ಹಿಡಿದುಕೊಂಡಿರುವ ಪೋಟೋಗಳನ್ನು ತೆಗೆದಿಲ್ಲ.

11. ಚಾಸಾ-1 ರವರು ಸ್ಥಳಕ್ಕೆ ಬರುವಂತೆ ಮೌಖಿಕ ಆದೇಶ ಕೊಟಿರುತ್ತಾರೆ. ಚಾಸಾ-1 ರವರು ನನಗೆ ಪೋನ್ ಮಾಡಿ ಹೇಳಿದಾಗ ಮಧ್ಯಾಹ್ನ 11.45 ರಿಂದ 12.00 ಗಂಟೆಯಾಗಿತ್ತು. ನಾನು ಠಾಣೆಗೆ ಬಂದಾಗ ಪಂಚರು ಇನ್ನು ಯಾರೂ ಬಂದಿರಲಿಲ್ಲ. ಪಂಚರು ಮತ್ತು ಪತ್ರಾಂಕಿತ ಅಧಿಕಾರಿಯವರು ಮೊದಲು ಠಾಣೆಗೆ ಬಂದರು.

12. ನಾವುಗಳು ವಿದ್ಯಾನಗರ ಪೋಲೀಸ್ ಠಾಣೆಯನ್ನು ಮಧ್ಯಾಹ್ನ 12.15 ಕ್ಕೆ ಬಿಟ್ಟೆವು. ಜೀಪಿನಲ್ಲಿ ಚಾಸಾ-1, ಚಾಸಾ-2 ರಿಂದ ಚಾಸಾ-4 ರವರು ಮತ್ತು ಜೀಪಿನ ಚಾಲಕ ಹೋದರು. ಜೀಪನ್ನು ಪಿ.ಬಿ. ರಸ್ತೆಯ ಅಶೋಟ್ ಇಂಟರ್ ನ್ಯಾಷನಲ್ ಹೋಟೆಲ್ ಬಳಿ ನಿಲ್ಲಿಸಿದೆವು. ಅಶೋಕ ಇಂಟರ್ ನ್ಯಾಷನಲ್ ಹೋಟೆಲ್ಲಿನಿಂದ ನಾವು ನಿಂತು ಗಮನಿಸುತ್ತಿದ್ದ ಸ್ಥಳ ಸುಮಾರು 200 ಮೀಟರ್ ದೂರ ಇದೆ. ಇಂದಿರಾ ಕ್ಯಾಂಟೀನ್ ಅಶೋಕ್ ಹೋಟೆಲ್ ಎದುರುಗಡೆ ಇದೆ. ಸಾಕ್ಷಿ ಪುನಃ ಹೇಳುತ್ತಾರೆ. ಇಂದಿರಾ ಕ್ಯಾಂಟೀನ ಅಶೋಕ್ ಹೋಟೆಲ್ಲಿನಿಂದ ಅದೇ ರಸ್ತೆಯಲ್ಲಿ ಸ್ವಲ್ಪ ಮುಂದೆ ಇದೆ.

13. ನಾವು ಜೀಪನ್ನು ಪಿ.ಬಿ. ರಸ್ತೆಯಲ್ಲಿ ನಿಲ್ಲಿಸಿದ್ದೆವು. ಪಿ.ಬಿ. ರಸ್ತೆಯಿಂದ ಅಶೋಕ ಹೋಟೆಲ್ ವರೆಗೆ ಸುಮಾರು 10 ಕಟ್ಟಡಗಳು ಇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಒಂದೇ ಕಟ್ಟಡ ಇದೆ ಎಂದು ಹೇಳುತ್ತಾರೆ. ನಾವು ನಿಟ್ಟುವಳ್ಳಿಗೆ ಹೋಗುವ ರಸ್ತೆಯಲ್ಲಿ ನಿಂತು ಗಮನಿಸುತ್ತಿದ್ದೆವು. ನಿಟ್ಟುವಳ್ಳಿ ರಸ್ತೆಯಲ್ಲಿ ನಾವು ನಿಂತಿದ್ದ ಸ್ಥಳದಿಂದ ಇಂದಿರಾ ಕ್ಯಾಂಟೀನ್ ಕೇವಲ 50 ರಿಂದ 100 ಅಡಿ ದೂರದಲ್ಲಿ ಇದೆ ಎಂದರೆ ಸರಿ. ನಾವು ಗಮನಿಸುತ್ತಿದ್ದ ಸ್ಥಳದಿಂದ ಆರೋಪಿತರು ನಿಂತಿದ್ದ ಸ್ಥಳ 100 ಮೀಟರ್ ದೂರ ಇತ್ತು.

14. ಚಾಸಾ-1 ರವರು ನನಗೆ ಹಣವನ್ನು ಕೊಟ್ಟಿದ್ದನ್ನು ಪಂಚರು ಮತ್ತು ಪತ್ರಾಂಕಿತ ಅಧಿಕಾರಿ ನೋಡಿರುತ್ತಾರೆ. ಚಾಸಾ-1 ರವರು ಒಟ್ಟು ಐದು ನೋಟುಗಳನ್ನು ಎಣಿಸಿ ಕೊಟ್ಟರು. ನಾವು 3 ರಿಂದ 4 ನಿಮಿಷಗಳ ಕಾಲ ಆರೋಪಿತರ ಚಲನವಲನಗಳನ್ನು ಗಮನಿಸುತ್ತಿದ್ದೆವು. ನಾವು ಆರೋಪಿತರನ್ನು ಗಮನಿಸುತ್ತಿದ್ದ ಸಂದರ್ಭದಲ್ಲಿ ಯಾವುದೇ ಸಾರ್ವಜನಿಕರು ಆರೋಪಿತರಿಂದ ಗಾಂಜಾ ಪ್ಯಾಕೇಟಗಳನ್ನು ಖರೀದಿ ಮಾಡಿಲ್ಲ.

15. ಈ ಘಟನೆಗೂ ಪೂರ್ವದಲ್ಲಿ ನಾನು ಸಿ.ಇ.ಎನ್. ಪೋಲೀಸ್ ಠಾಣೆಯಲ್ಲಿ 2 ವರ್ಷ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ಆರೋಪಿತರಿಂದ ಗಾಂಜಾ ಖರೀದಿ ಮಾಡಲು ಹೋದಾಗ ಆರೋಪಿತರಿಂದ ಓಡಿ ಹೋಗಲು ಯತ್ನಿಸಿರುವುದಿಲ್ಲ. ಸಾಕ್ಷಿಯು ಮುಂದುವರಿದು ತನ್ನ ವೇಷ ಭೂಷಣಗಳು ಸಾಮಾನ್ಯ ಜನರಂತೆ ಇತ್ತು. ಹಳದಿ ಮತ್ತು ಕೆಂಪು ಬಣ್ಣದ ಹಿಡಿದುಕೊಂಡಿದ್ದ ವ್ಯಕ್ತಿಯಿಂದ ನಾನು ಗಾಂಜಾ ಖರೀದಿ ಮಾಡಿದ್ದೆ. ಹಳದಿ ಮತ್ತು ಕೆಂಪು ಬಣ್ಣದ ಕವರನ ಮೇಲೆ ಮಾರುತಿ ಟೆಕ್ಸ ಟೈಲ್ಸ್ ಎಂದು ಬರೆದಿರುವುದನ್ನು ನಾನು ತಕ್ಷಣವೇ ಗಮನಿಸಿರುತ್ತೇನೆ. ಮಾರುತಿ ಟೆಕ್ಸ ಟೈಲ್ಸನಿಂದ ನಾನು ಬಹಳಷ್ಟು ಬಾರಿ ಬಟ್ಟೆಗಳನ್ನು ಖರೀದಿ ಮಾಡಿದ್ದೇನೆ. ಆ ಸಂದರ್ಭದಲ್ಲಿ ಎಂ.ಓ.3 ಎಂದು ಗುರುತಿಸಲಾದಂತಹ ಚೀಲಗಳನ್ನು ನನಗೆ ಅಂಗಡಿಯವರು ಕೊಟ್ಟಿದ್ದಾರೆ ಎಂದರೆ ಸರಿ. ಎಂ.ಓ.3 ರ ಚೀಲದ ಮೇಲೆ ಪಂಚರ ಸಹಿಯಾಗಲೀ ಚಾಸಾ.1 ರವರ ಸಹಿಯಾಗಲೀ ಇರುವುದಿಲ್ಲ. ಎಂ.ಓ.4 ಎಂದು ಗುರುತಿಸಲಾದ ಕೆಂಪು ಬಣ್ಣದ ಚೀಲದ ಮೇಲೆಯೂ ಸಹ ಚಾಸಾ-1 ರವರ ಸಹಿಯಾಗಲೀ, ಪಂಚರ ಸಹಿಯಾಗಲೀ ಇರುವುದಿಲ್ಲ. ಸದರಿ ಚೀಲಗಳಲ್ಲಿ ಇರುವ ಸೊಪ್ಪು ಗಾಂಜಾ ಸೊಪ್ಪು ಎಂದು ಚಾಸಾ-1 ರವರು ನನಗೆ ತಿಳಿಸಿರುತ್ತಾರೆ.

16. ಆರೋಪಿತರು ಸದರಿ ಗಾಂಜಾ ಸೊಪ್ಪುಗಳನ್ನು ಎಷ್ಟು ದಿನಗಳ ಹಿಂದೆ ಖರೀದಿಸಿ ತಂದಿದ್ದೇವೆ ಎಂದು ನನ್ನ ಬಳಿ ಹೇಳಿಲ್ಲ, ಚಾಸಾ-1 ರವರ ಬಳಿ ಆರೋಪಿತರು ಹೇಳಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಚಾಸಾ-1 ರವರು ಅವರ ಪ್ಯಾಂಟಿನ ಎಡ ಜೇಬಿನಿಂದ ಹಣವನ್ನು ನನಗೆ ತೆಗೆದುಕೊಟ್ಟರು. ಚಾಸಾ-1 ರವರು ಪ್ಯಾಂಟಿನ ಜೇಬಿನಲ್ಲಿ ಇನ್ನು ಎಷ್ಟು ಹಣ ಇತ್ತು ಎಂದು ನನಗೆ ಗೊತ್ತಿಲ್ಲ.

ಚಾಸಾ.1 ರವರು ನನಗೆ ಐದು ನೋಟುಗಳನ್ನು ಮಾತ್ರ ತೆಗೆದುಕೊಟ್ಟರು. ಈ ಪ್ರಕರಣದ ಸಂದರ್ಭದಲ್ಲಿ 100 ರೂಪಾಯಿ ಹೊಸ ನೋಟುಗಳೂ ಸಹ ಚಾಲ್ತಿಯಲ್ಲಿದ್ದವು ಎಂದರೆ ಸರಿ.

17. 1 ನೇ ಆರೋಪಿಯ ಬಳಿ 100 ರೂ ಮುಖಬೆಲೆಯ 10 ನೋಟುಗಳು ಇದ್ದವು. ಸದರಿ 10 ನೋಟುಗಳು ಹೊಸ ನೋಟುಗಳಾಗಿದ್ದವು. ಹಳೆಯ ಮತ್ತು ಹೊಸ ನೋಟುಗಳ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿ.

18. ನಾವು ಮಹಜರು ಮಾಡಿದ ಸ್ಥಳದಿಂದ ಅಶೋಕ ಹೋಟೆಲ್ 60 ಅಡಿ ದೂರದಲ್ಲಿ ಇದೆ., ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ 80 ಅಡಿ ದೂರದಲ್ಲಿ ಇದೆ. ಮಹಜರು ಮಾಡಿದ ಸ್ಥಳದಿಂದ ಫೋಟೋಗಳನ್ನು ತೆಗೆದಲ್ಲಿ ಅಶೋಕ ಹೋಟೆಲ್ ಕಟ್ಟಡ ಮತ್ತು ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಕಟ್ಟಡ ಕಾಣಿಸುತ್ತವೆ ಎಂದರೆ ಸರಿ. ಪಂಚನಾಮೆಯನ್ನು ಸ್ಥಳದಲ್ಲಿಯೇ ಲ್ಯಾಪ್ ಟಾಪಿನಲ್ಲಿ ಟೈಪು ಮಾಡಿರುತ್ತಾರೆ. ನಿಪಿ-11 ರಿಂದ ನಿಪಿ-21 ಎಂದು ಗುರುತಿಸಲಾದ ಫೋಟೋಗಳಲ್ಲಿ ನಿಪಿ-11 ಮತ್ತು ನಿಪಿ-12 ರ ಫೋಟೋಗಳಲ್ಲಿ ಲ್ಯಾಪ್ ಟಾಪ್ ಕಾಣಿಸುತ್ತದೆ. ಲ್ಯಾಪ್ ಟಾಪಿನಲ್ಲಿ ಟೈಪು ಮಾಡಿದ್ದನ್ನು ಸ್ಥಳದಲ್ಲಿಯೇ ಸ್ಥಳಕ್ಕೆ ತೆಗೆದುಕೊಂಡು ಹೋಗಿದ್ದ ಪ್ರಿಂಟರಿನಲ್ಲಿ ಪ್ರಿಂಟ್ ತೆಗೆದಿರುತ್ತೇವೆ. ನಿಪಿ-11 ರಿಂದ ನಿಪಿ-21 ಎಂದು ಗುರುತಿಸಲಾದ ಫೋಟೋಗಳಲ್ಲಿ ಪ್ರಿಂಟರ್ ಕಾಣಿಸುವುದಿಲ್ಲ.

19. ಆ ದಿನ ಆರೋಪಿತರು ಪಂಚೆ ಮತ್ತು ಶರ್ಟು ಧರಿಸಿದ್ದರು. 1 ನೇ ಮತ್ತು 2 ನೇ ಆರೋಪಿತರು ಶರ್ಟು ಮತ್ತು ಪಂಚೆ ಧರಿಸಿದ್ದರು. 3 ನೇ ಆರೋಪಿ ಪಂಚೆ ಧರಿಸಿರಲಿಲ್ಲ.

20. ನಾನು ಈ ಮೊದಲು 2 ರಿಂದ 3 ಗಾಂಜಾ ಪ್ರಕರಣಗಳ ದಾಳಿಗಳಲ್ಲಿ ಭಾಗಿಯಾಗಿದ್ದೆ. ಈ ಪ್ರಕರಣಕ್ಕಿಂತ 2-3 ತಿಂಗಳ ಮೊದಲು ಗಾಂಜಾ ಪ್ರಕರಣಗಳ ದಾಳಿಯಲ್ಲಿ ಭಾಗವಹಿಸಿದ್ದೆ. ಹಿಂದಿನ ಪ್ರಕರಣಗಳಲ್ಲಿ ದಾಳಿ ಮಾಡಿ, ವಶಪಡಿಸಿಕೊಂಡ ಗಾಂಜಾವನ್ನು ಪೋಲೀಸ್ ಠಾಣೆಯಲ್ಲಿಯೇ ಇಟ್ಟಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ದಾಳಿ ಮಾಡಿದ ನಂತರ ನಾವು ನೇರವಾಗಿ ನಮ್ಮ ಅಂದರೆ ಸಿ.ಇ.ಎನ್. ಪೋಲೀಸ್ ಠಾಣೆಗೆ ಹೋದೆವು.

21. ಆ ದಿನ ನಾನು ಆರೋಪಿತರಿಂದ ಗಾಂಜಾ ಖರೀದಿ ಮಾಡಿದ್ದೇನೆ ಎಂದು ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಚಾಸಾ-1 ರವರ ಮಾತು ಕೇಳಿ ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

22. ನಿಪಿ-11 ರಿಂದ ನಿಪಿ-21 ಎಂದು ಗುರುತಿಸಲಾದ ಪೋಟೋಗಳಲ್ಲಿ ಅಶೋಕ ಹೋಟೆಲ್, ಕೆ.ಎಸ್.ಆರ್,ಟಿ.ಸಿ . ಬಸ್ ನಿಲ್ದಾಣ ಯಾವುದೂ ಕಾಣಿಸುವುದಿಲ್ಲ ಎಂದರೆ ಸರಿ. ನಿಪಿ-11 ರಿಂದ ನಿಪಿ-21 ಎಂದು ಗುರುತಿಸಲಾದ ಪೋಟೋಗಳಲ್ಲಿ ಕಂಡು ಬರುವ ರಸ್ತೆ ವಿದ್ಯಾನಗರ ಪೋಲೀಸ್ ಠಾಣೆಯಲ್ಲಿ ಇದ್ದಂತೆಯೇ ಇದೆ ಎಂದರೆ ಸರಿಯಲ್ಲ. ನಿಪಿ-11 ರಿಂದ ನಿಪಿ-21 ಪೋಟೋಗಳನ್ನು ವಿದ್ಯಾನಗರ ಪೋಲೀಸ್ ಠಾಣೆಯ ಆವರಣದಲ್ಲಿ ತೆಗೆಯಲಾಗಿದೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಕೋರಿದ್ದು, ಕಾರಣ ಪೋಟೋಗಳಲ್ಲಿ ಆರೋಪಿತರ ಭಾವಚಿತ್ರ ಭೌತಿಕವಾಗಿ ಕಂಡು ಬಂದಿದ್ದು, ಆ ಬಗ್ಗೆ ಸಾಕ್ಷಿಯು ಸರಿಯಾದ ಮಾಹಿತಿಯನ್ನು ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದಾಗ ಹೇಳಿಲ್ಲವಾದ್ದರಿಂದ, ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಕೋರಿದ್ದು, ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲು : ಸರಕಾರಿ ಅಭಿಯೋಜಕರಿಂದ</u>** :

ನಿಪಿ-11 ರಿಂದ ನಿಪಿ-21 ಎಂದು ಗುರುತಿಸಲಾದ ಪೋಟೋಗಳಲ್ಲಿ ಆರೋಪಿತರು ಪ್ಯಾಂಟ್ ಮತ್ತು ಶರ್ಟನ್ನು ಧರಿಸಿರುತ್ತಾರೆ ಎಂದರೆ ಸರಿ. ಪಂಚೆಯನ್ನು ಯಾರೂ ಧರಿಸಿಲ್ಲ ಎಂದರೆ ಸರಿ.

**ಮರು ವಿಚಾರಣೆ** : ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ .

(ರಾಜೇಶ್ವರಿ ಎನ್. ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರು,
ದಾವಣಗೆರೆ.